# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 796 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 13.07.2023 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ನಗರ ಸೇರಿದಂತೆ ರಾಜ್ಯಾದ್ಯಂತ ಅಬಕಾರಿ ಇಲಾಖೆಯು ಸಿಎಲ್–2 (ರಿಟೈಲ್ ಅಂಗಡಿ) ಪರವಾನಗಿ ಪಡೆದು ಸಿಎಲ್–9 (ಬಾರ್ ಮತ್ತು ರೆಸ್ಟೋರೆಂಟ್) ಪರವಾನಗಿಯ ಮಾನದಂಡದಲ್ಲಿ ಮದ್ಯವನ್ನು ಚಿಲ್ಲರೆ ಮಾರಾಟ ಮಾಡುತ್ತಿದ್ದು, ಅದೇ ಸ್ಥಳದಲ್ಲಿ ಗ್ರಾಹಕರಿಗೆ ಮದ್ಯ ಸೇವನೆಗೆ ಅವಕಾಶ ಮಾಡಿಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ವ್ಯವಸ್ಥೆಯನ್ನು ತಡೆಗಟ್ಟಲು ವಿಫಲವಾಗಿರುವ ಸ್ಥಳೀಯ ಅಬಕಾರಿ ಅಧಿಕಾರಗಳ ಮೇಲೆ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಇಲಾಖೆಯಿಂದ ನೀಡಲಾಗುವ ಸಿಎಲ್–2 (ರಿಟೈಲ್ ಅಂಗಡಿ) ಸನ್ನದುಗಳಲ್ಲಿ ಮುಚ್ಚಿದ ಬಿರುಡೆಯೊಂದಿಗೆ ಮದ್ಯವನ್ನು ಮಾರಾಟ ಮಾಡುವ ಷರತ್ತನ್ನು ವಿಧಿಸಲಾಗಿದ್ದು, ಕೆಲವೊಂದು ಸನ್ನದುದಾರರು ಷರತ್ತನ್ನು ಉಲ್ಲಂಘಿಸಿ ಚಿಲ್ಲರೆಯಾಗಿ ಮದ್ಯ ಮಾರಾಟ ಮಾಡುವುದು ಹಾಗೂ ಅದೇ ಸ್ಥಳದಲ್ಲಿ ಮದ್ಯವನ್ನು ಸೇವಿಸಲು ಗ್ರಾಹಕರಿಗೆ ಅವಕಾಶ ಕಲ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಸನ್ನದು ಷರತ್ತು ಉಲ್ಲಂಘಿಸುವ ಸನ್ನದುದಾರರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ, 1965 ಹಾಗೂ ತತ್ಸಂಬಂಧ ನಿಯಮಗಳನ್ವಯ ಸ್ಥಳೀಯ ಕಾರ್ಯನಿರ್ವಾಹಕ ಅಬಕಾರಿ ಅಧಿಕಾರಿಗಳು ಪ್ರಕರಣಗಳನ್ನು ದಾಖಲಿಸಿ ನಿಯಂತ್ರಣಾ ಕ್ರಮಗಳನ್ನು ಕೈಗೊಂಡಿರುತ್ತಾರೆ. ಆದ್ದರಿಂದ, ಪ್ರಕರಣ ದಾಖಲಿಸುವಲ್ಲಿ ಯಾವುದೇ ವಿಫಲತೆಯು ಕಂಡುಬಂದಿರುವುದಿಲ್ಲ. ಇಂತಹ ಸನ್ನದು ಷರತ್ತು ಉಲ್ಲಂಘನೆಯ ಪ್ರಕರಣಗಳು (ಬಿ.ಎಲ್.ಸಿ) ದಂಡ ವಿಧಿಸಿ ಇತ್ಯರ್ಥಪಡಿಸಬಹುದಾದಂತಹ ಪ್ರಕರಣಗಳಾಗಿರುತ್ತವೆ. |

<table>
<tr>
<td>(ಆ)</td>
<td>ಈ ವ್ಯವಸ್ಥೆಯಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದ್ದು ಹಲವಾರು ಮಹಿಳಾ ಸಂಘಟನೆಗಳು ಮತ್ತು ಅನೇಕ ಸಂಘ ಸಂಸ್ಥೆಗಳು ಇದನ್ನು ಸರಿಪಡಿಸಲು ಹೋರಾಟವನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಪಿಡುಗನ್ನು ತೊಲಗಿಸಲು ಸರ್ಕಾರ ಯಾವ ಯಾವ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ? (ಮಾಹಿತಿ ನೀಡುವುದು)</td>
<td>ಸಿ.ಎಲ್–2 ಸನ್ನದು ಮಳಿಗೆಗಳಲ್ಲಿ ಮದ್ಯವನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಹಾಗೂ ಅಲ್ಲಿಯೇ ಮದ್ಯವನ್ನು ಸೇವಿಸಲು ಅವಕಾಶ ಕಲ್ಪಿಸಿರುವ ಸನ್ನದುಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಕೋರಿ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸ್ಥಳೀಯ ಅಬಕಾರಿ ಕಛೇರಿಗಳಿಗೆ ದೂರುಗಳು ಸ್ವೀಕೃತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಚಿಲ್ಲರೆ ಮದ್ಯ ಮಾರಾಟದ ವಿರುದ್ಧ ಒಟ್ಟು 1415 ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲಾಗಿದ್ದು, ವಿವರ ಕೆಳಕಂಡಂತಿದೆ. ಇದೇ ಪ್ರವೃತ್ತಿಯನ್ನು ಮುಂದುವರೆಸಿದ ಸನ್ನದುಗಳನ್ನು ನಿಲಂಬನೆ/ರದ್ದುಪಡಿಸಲು ಕೂಡ ನಿಯಮಗಳಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>
<table>
<tr><th>ಅಬಕಾರಿ ಸಾಲು (ಜುಲೈನಿಂದ ಜೂನ್‌ವರೆಗೆ)</th><th>ಚಿಲ್ಲರೆ ಮದ್ಯ ಮಾರಾಟದ ವಿರುದ್ಧ ದಾಖಲಿಸಿದ ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳ ಸಂಖ್ಯೆ</th></tr>
<tr><td>2020–21</td><td>422</td></tr>
<tr><td>2021–22</td><td>485</td></tr>
<tr><td>2022–23 (ಮೇ ಅಂತ್ಯ ದವರೆಗೆ)</td><td>508</td></tr>
<tr><td>ಒಟ್ಟು</td><td>**1415**</td></tr>
</table>
</td>
</tr>
</table>

**ಆಇ 42 ಇಎಲ್‌ಕ್ಯೂ 2023**

(ಆರ್.ಬಿ.ತಿಮ್ಮಾಪುರ)

ಅಬಕಾರಿ ಸಚಿವರು